ಅನುಬಂಧ-1(ಎ)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ಉತ್ತರ ತಾಲ್ಲೂಕು, ಸರ್ವೆ ನಂ. 64, ದೊಡ್ಡಬಿದರಿಕಲ್ಲು ಗ್ರಾಮ, ಯಶವಂತಪುರ ಹೋಬಳಿ, ಪೀಣ್ಯ ಇಲ್ಲಿನ ಸಂಕೀರ್ಣದಲ್ಲಿ ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರಗಳನ್ನು ನಿರ್ಮಿಸಲು ನಿವೇಶನಗಳನ್ನು ಹಂಚಿಕೆ ಮಾಡುವ ಕುರಿತು.

ಓದಲಾಗಿದೆ: ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ಸಂಖ್ಯೆ: ಕೆಎಸ್‌ಹೆಚ್‌ಡಿಸಿ/ಅಭಿವೃದ್ಧಿ/09-10/2874, ದಿನಾಂಕ: 7-11-2009.

*****

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರು ಈ ಕೆಳಕಂಡಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ :-

1) ಅಭಿವೃದ್ಧಿ ಆಯುಕ್ತರು [ಕರಕುಶಲ], ಭಾರತ ಸರ್ಕಾರ ಇವರು ಹೆಚ್ಚಿನ ಸಂಖ್ಯೆಯಲ್ಲಿ ಕುಶಲಕರ್ಮಿಗಳು ಇರುವ ಕಡೆ ಸಾಮಾನ್ಯ ಸೌಲಭ್ಯ ಕೇಂದ್ರಗಳು, ವಸತಿ ಕಾರ್ಯಾಗಾರಗಳು ಮತ್ತು ಇತರ ಮೂಲಭೂತ ಸೌಕರ್ಯಗಳನ್ನೊಳಗೊಂಡ ಸುವ್ಯವಸ್ಥಿತವಾದ ಬಹು ವೃತ್ತಿಗಳ ಸಂಕೀರ್ಣವನ್ನು ನಿರ್ಮಿಸಲು ಯೋಜನೆಯನ್ನು ರೂಪಿಸಲಾಗಿದ್ದು, ಮೆ:ಕೆ.ಎಸ್.ಹೆಚ್.ಡಿ.ಸಿ. ನಿಗಮವು ಇಂತಹ ವೃತ್ತಿ ಸಂಕೀರ್ಣಗಳನ್ನು ಮೈಸೂರು, ಸಾಗರ, ಶಿರಸಿ, ಸೊರಬ, ಚನ್ನಪಟ್ಟಣ, ಕುಮಟಾ ಮತ್ತು ಬೀದರ್‌ನಲ್ಲಿ ನಿರ್ಮಿಸಲಾಗಿದೆ.

2) ಬೆಂಗಳೂರಿನಲ್ಲಿಯೂ ಸಹ ಇಂತಹ ಸಂಕೀರ್ಣವನ್ನು ಸ್ಥಾಪಿಸಲು ನಿಗಮವು ಉದ್ದೇಶಿಸಿದ್ದು, ಬೆಂಗಳೂರಿನ ಸುತ್ತಮುತ್ತಲೂ ಕರಕುಶಲ ಕರ್ಮಿಗಳು ಸುಮಾರು 350ಕ್ಕೂ ಹೆಚ್ಚಿನ ಜನರಿದ್ದು, ಶ್ರೀಗಂಧದ ಕೆತ್ತನೆ, ಬ್ರಾಂಜ್ ಕ್ರಾಫ್ಟ್‌ಗಳ ತಯಾರಿಕೆಯಲ್ಲಿ ತೊಡಗಿರುತ್ತಾರೆಂದೂ ಹಾಗೂ ಇತರೆ ವೃತ್ತಿಪರ ಕರಕುಶಲಗಾರರು ಇದ್ದಾರೆಂದು ಇವರಿಗಾಗಿ ವೃತ್ತಿ ಸಂಕೀರ್ಣಗಳನ್ನು ನಿರ್ಮಿಸಲು ಯೋಜಿಸಲಾಗಿದೆ ಎಂದೂ, ಕುಶಲಕರ್ಮಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವ ದೃಷ್ಟಿಯಿಂದ ಇಂತಹ ಸಂಕೀರ್ಣಗಳನ್ನು ನಿರ್ಮಿಸಲಾಗುತ್ತಿದೆ. ಈಗಾಗಲೇ ಸರ್ವೆ ನಂ. 64, ದೊಡ್ಡಬಿದರಿಕಲ್ಲು ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ಇಲ್ಲಿ 20-00 ಎಕರೆ ಜಾಗವನ್ನು ಕಂದಾಯ ಇಲಾಖೆಯು ಹಂಚಿಕೆ ಮಾಡಿದ್ದು, ದಿನಾಂಕ: 17-2-2009ರಂದು ಸದರಿ ಜಮೀನನ್ನು ನಿಗಮದ ಸುಪರ್ದಿಗೆ ನೀಡಲಾಗಿದೆ ಎಂದು ವರದಿ ಮಾಡಿದ್ದಾರೆ.

(2)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ಉತ್ತರ ತಾಲ್ಲೂಕು, ಸರ್ವೆ ನಂ. 64, ದೊಡ್ಡಬಿದರಿಕಲ್ಲು ಗ್ರಾಮ, ಯಶವಂತಪುರ ಹೋಬಳಿ, ಪೀಣ್ಯಾ ಇಲ್ಲಿನ ಸಂಕೀರ್ಣದಲ್ಲಿ ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರಗಳನ್ನು ನಿರ್ಮಿಸಲು ನಿವೇಶನಗಳನ್ನು ಹಂಚಿಕೆ ಮಾಡುವ ಕುರಿತು.

ಓದಲಾಗಿದೆ: ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ಸಂಖ್ಯೆ: ಕೆಎಸ್‌ಹೆಚ್‌ಡಿಸಿ/ ಅಭಿವೃದ್ಧಿ/09-10/2874, ದಿನಾಂಕ: 7-11-2009.

*****

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರು ಈ ಕೆಳಕಂಡಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ :-

1) ಅಭಿವೃದ್ಧಿ ಆಯುಕ್ತರು [ಕರಕುಶಲ], ಭಾರತ ಸರ್ಕಾರ ಇವರು ಹೆಚ್ಚಿನ ಸಂಖ್ಯೆಯಲ್ಲಿ ಕುಶಲಕರ್ಮಿಗಳು ಇರುವ ಕಡೆ ಸಾಮಾನ್ಯ ಸೌಲಭ್ಯ ಕೇಂದ್ರಗಳು, ವಸತಿ ಕಾರ್ಯಾಗಾರಗಳು ಮತ್ತು ಇತರ ಮೂಲಭೂತ ಸೌಕರ್ಯಗಳನ್ನೊಳಗೊಂಡ ಸುವ್ಯವಸ್ಥಿತವಾದ ಬಹು ವೃತ್ತಿಗಳ ಸಂಕೀರ್ಣವನ್ನು ನಿರ್ಮಿಸಲು ಯೋಜನೆಯನ್ನು ರೂಪಿಸಲಾಗಿದ್ದು, ಮೆ:ಕೆ.ಎಸ್.ಹೆಚ್.ಡಿ.ಸಿ. ನಿಗಮವು ಇಂತಹ ವೃತ್ತಿ ಸಂಕೀರ್ಣಗಳನ್ನು ಮೈಸೂರು, ಸಾಗರ, ಶಿರಸಿ, ಸೊರಬ, ಚನ್ನಪಟ್ಟಣ, ಕುಮಟಾ ಮತ್ತು ಬೀದರ್‌ನಲ್ಲಿ ನಿರ್ಮಿಸಲಾಗಿದೆ.

2) ಬೆಂಗಳೂರಿನಲ್ಲಿಯೂ ಸಹ ಇಂತಹ ಸಂಕೀರ್ಣವನ್ನು ಸ್ಥಾಪಿಸಲು ನಿಗಮವು ಉದ್ದೇಶಿಸಿದ್ದು, ಬೆಂಗಳೂರಿನ ಸುತ್ತಮುತ್ತಲೂ ಕರಕುಶಲ ಕರ್ಮಿಗಳು ಸುಮಾರು 350ಕ್ಕೂ ಹೆಚ್ಚಿನ ಜನರಿದ್ದು, ಶ್ರೀಗಂಧದ ಕೆತ್ತನೆ, ಬ್ರಾಂಜ್ ಕ್ರಾಫ್ಟ್‌ಗಳ ತಯಾರಿಕೆಯಲ್ಲಿ ತೊಡಗಿರುತ್ತಾರೆಂದೂ ಹಾಗೂ ಇತರೆ ವೃತ್ತಿಪರ ಕರಕುಶಲಗಾರರು ಇದ್ದಾರೆಂದು ಇವರಿಗಾಗಿ ವೃತ್ತಿ ಸಂಕೀರ್ಣಗಳನ್ನು ನಿರ್ಮಿಸಲು ಯೋಜಿಸಲಾಗಿದೆ ಎಂದೂ, ಕುಶಲಕರ್ಮಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವ ದೃಷ್ಟಿಯಿಂದ ಇಂತಹ ಸಂಕೀರ್ಣಗಳನ್ನು ನಿರ್ಮಿಸಲಾಗುತ್ತಿದೆ. ಈಗಾಗಲೇ ಸರ್ವೆ ನಂ. 64, ದೊಡ್ಡಬಿದರಿಕಲ್ಲು ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ಇಲ್ಲಿ 20-00 ಎಕರೆ ಜಾಗವನ್ನು ಕಂದಾಯ ಇಲಾಖೆಯು ಹಂಚಿಕೆ ಮಾಡಿದ್ದು, ದಿನಾಂಕ: 17-2-2009ರಂದು ಸದರಿ ಜಮೀನನ್ನು ನಿಗಮದ ಸುಬರ್ದಿಗೆ ನೀಡಲಾಗಿದೆ ಎಂದು ವರದಿ ಮಾಡಿದ್ದಾರೆ.